# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 406(587) |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20/02/2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಮುದ್ರಣಾಲಯದಲ್ಲಿ ದಿನಗೂಲಿ ನೌಕರರು ಮಂಜೂರಾದ ಖಾಲಿ ಹುದ್ದೆಗಳಿಗೆ ಎದುರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ; | ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಯ ನಿರತ ದಿನಗೂಲಿ ನೌಕರರು ಯಾವುದೇ ಮಂಜೂರಾದ ಹುದ್ದೆಗೆದುರಾಗಿ ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ. |
| ಆ) | ಸರ್ಕಾರಿ ಮುದ್ರಣಾಲಯದಲ್ಲಿ ಅರೆ ಕುಶಲರು, ಕುಶಲರಲ್ಲದವರು ಎಂಬ ಮಂಜೂರಾದ ಹುದ್ದೆಗಳಿವೆಯೇ; ಹಾಗಿದ್ದಲ್ಲಿ, ಅಂತಹ ಎಷ್ಟು ಹುದ್ದೆಗಳು ಇವೆ; | ಅರೆ ಕುಶಲರು ಮತ್ತು ಕುಶಲರಲ್ಲದದವರು ಎಂಬ ಯಾವುದೇ ರೀತಿಯ ಹುದ್ದೆಗಳು ಮಂಜೂರಾಗಿರುವುದಿಲ್ಲ |
| ಇ) | 1994ರಲ್ಲಿ ದಿನಗೂಲಿ ನೌಕರರು ಹುದ್ದೆಗಳಿಗೆ ಎದುರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ ಸಲ್ಲಿಸಿದ್ದಲ್ಲಿ ಇದರ ಪ್ರತಿ ನೀಡುವುದು; | ಮಂಜೂರಾದ ಹುದ್ದೆಗಳಿಗೆ ಎದುರಾಗಿ ಕರ್ತವ್ಯ ನಿರ್ವಹಿಸದ ಕಾರಣ ಉದ್ಭವಿಸುವುದಿಲ್ಲ. |
| ಈ) | 2013ರಲ್ಲಿ ದಿನಗೂಲಿ ನೌಕರರಿಗೆ ಯಾವ ಮಾನದಂಡದ ಮೇಲೆ | ಸರ್ಕಾರವು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ನ್ನು ದಿನಾಂಕ: 15/02/2013ರ ಕರ್ನಾಟಕ ರಾಜ್ಯ ಪತ್ರದಲ್ಲಿ |

| | | |
|---|---|---|
| | ಹುದ್ದೆಗಳನ್ನು ನೀಡಲಾಗಿದೆ; | ಪ್ರಕಟಿಸಿ ಜಾರಿಗೊಳಿಸಿರುತ್ತದೆ. ಈ ಅಧಿನಿಯಮವನ್ನು ಸರ್ಕಾರವು ವಿವಿಧ ಸಂಸ್ಥೆಗಳಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿಗೆ ಮತ್ತು ಸೇವಾವಧಿಯ ಕನಿಷ್ಠ ಭದ್ರತೆ, ಉತ್ತಮ ವೇತನ ಮತ್ತು ದೀರ್ಘಾವಧಿಯ ಸರ್ಕಾರಿ ಸೇವೆಯನ್ನು ಕೊನೆಗೊಳಿಸಿರುವವರಿಗೆ ಕೆಲವು ಸಾಮಾಜಿಕ ಭದ್ರತೆಯನ್ನು ನೀಡುವ ಉದ್ದೇಶದಿಂದ ಜಾರಿಗೆ ತಂದಿರುತ್ತದೆ. "ಈ ಅಧಿನಿಯಮದ ನಿಯಮ 3(1) ರ ಅಡಿಯಲ್ಲಿ ಸರ್ಕಾರವು ಅಧಿಸೂಚಿಸಿದ ಹೆಸರಿನ ದಿನಗೂಲಿ ನೌಕರರರು ಅವರಿಗೆ ಅರವತ್ತು ವರ್ಷಗಳ ವಯಸ್ಸು ಪೂರ್ಣವಾಗುವವರೆವಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಯತಕ್ಕದ್ದು. ಪರಂತು ಯಾವೊಬ್ಬ ದಿನಗೂಲಿ ನೌಕರನು ದಿನಗೂಲಿ ಆಧಾರದ ಮೇಲೆ ಆತನು ಪ್ರಥಮವಾಗಿ ನೇಮಕವಾದ ದಿನಾಂಕದಂದು ಹುದ್ದೆವರೆಗಿನ ನಿಯಮಿಸಲಾದ ಅರ್ಹತೆಯನ್ನು ಹೊಂದಿಲ್ಲದಿದ್ದರೆ ಆತನನ್ನು ಮುಂದುವರೆಸತಕ್ಕದ್ದಲ್ಲ ಎಂದು ಹಾಗೂ ನಿಯಮ (2) ರಲ್ಲಿ "ರಾಜ್ಯ ಸರ್ಕಾರವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಒಳಗಾಗಿ (1) ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಎಲ್ಲಾ ಸಂಸ್ಥೆಗಳ ಅರ್ಹ ದಿನಗೂಲಿ ನೌಕರರ ಹೆಸರುಗಳನ್ನು ಅಧಿಸೂಚಿಸತಕ್ಕದ್ದು ಎಂದು ತಿಳಿಸಿದೆ. ಅಧಿನಿಯಮದಡಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರ ಹೆಸರುಗಳನ್ನು ಅಧಿಸೂಚಿಸುವ ಬಗ್ಗೆ ಸರ್ಕಾರವು ದಿನಾಂಕ: 10/05/2013 ಹಾಗೂ 19/08/2013 ರ ಸುತ್ತೋಲೆ ಸಂಖ್ಯೆ: ಸಿಆಸುಇ 44 ರಲ್ಲಿ ನಿಗಧಿತ ನಮೂನೆ |

| | | |
|---|---|---|
| | | ನೀಡಿ ವಿವರಗಳನ್ನು ಭರ್ತಿ ಮಾಡಿ ಅದೇ ಮಾದರಿಯಲ್ಲಿ ಅಧಿಸೂಚಿಸುವಂತೆ ತಿಳಿಸಿರುವುದರ ಮೇರೆಗೆ ಇಲಾಖೆಯಲ್ಲಿ ದಿನಗೂಲಿ ನೌಕರರು ಯಾವ ಯಾವ ಶಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರೋ, ಅದೇ ಶಾಖೆಯ ಹುದ್ದೆಯ ಪದನಾಮಗಳನ್ನು ಸೂಚಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. |
| ಉ) | ಸರ್ಕಾರಿ ಮುದ್ರಣಾಲಯದಲ್ಲಿ ದಿನಗೂಲಿ ನೌಕರರಿಗೆ ನೀಡುತ್ತಿರುವ ಹುದ್ದೆಗಳಿಗೆ ವಿದ್ಯಾರ್ಹತೆ ಪರಿಗಣಿಸಲಾಗಿದೆಯೇ; | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಕಾ 86 ಎಲ್. ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯಲ್ಲಿ ದಿನಾಂಕ: 01/07/1984ರ ನಂತರ ಸೇವೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರನ್ನು ಯಾವುದೇ ಮಂಜೂರಾದ ಖಾಲಿ ಹುದ್ದೆಗೆ ಅಭಿಮುಖವಾಗಿ ಸೂಕ್ತ ಅರ್ಹತೆ ಹೊಂದಿರುವ ನೌಕರರಾಗಿ ನೇಮಕಾತಿ ಮಾಡಿರುವುದಿಲ್ಲ. ದಿನಾಂಕ: 01/07/1984ರ ನಂತರ ನೇಮಕಾತಿಗೊಂಡ ಸರ್ಕಾರದ ವಿವಿಧ ಇಲಾಖೆಗಳು, ಜಿಲ್ಲಾ ಪಂಚಾಯತ್‌ಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಸೇವೆಯಿಂದ ತೆಗೆದು ಹಾಕುವುದನ್ನು ತಡೆಹಿಡಿದು ರಿಟ್ ಅರ್ಜಿ ಸಂಖ್ಯೆ: 12610/1993 ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯವು ದಿನಾಂಕ:23/04/1993 ರಂದು ಆದೇಶಿಸಿತ್ತು. ಹೀಗಾಗಿ ದಿನಾಂಕ: 01/07/1984ರ ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಕ್ಕೊಳಪಟ್ಟು ಮುಂದುವರಿಸಲಾಗಿದೆ. ಆ ಸಂದರ್ಭದಲ್ಲಿ ಮುದ್ರಣ ಇಲಾಖೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರುಗಳಿಗೆ ಕನಿಷ್ಠ ವೇತನ ಕಾಯ್ದೆಯನ್ನು ಅಳವಡಿಸಿ.ಎಂ.ಡಬ್ಲ್ಯೂ 88, |
| ಊ) | ಸರ್ಕಾರಿ ಮುದ್ರಣಾಲಯದಲ್ಲಿ ಈ ನೌಕರರಿಗೆ ಮೂಲತಃ ನೀಡಿದ ಹುದ್ದೆಗಳನ್ನು ಹೊರತುಪಡಿಸಿ 2013ರಲ್ಲಿ ಹೊಸದಾಗಿ ಹುದ್ದೆಗಳನ್ನು ನೀಡಿರುವ ಉದ್ದೇಶವೇನು? | |

| | | |
|---|---|---|
| | | ದಿನಾಂಕ:13/04/1994 ರಲ್ಲಿ ನಿಗಧಿಪಡಿಸಿರುವಂತಹ ಮಜೂರಿಯನ್ನು ಅಭ್ಯರ್ಥಿಸತಕ್ಕದ್ದೆಂದು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಸೇಸ್ಥಅ 94, ದಿನಾಂಕ: 21/11/1994 ರಲ್ಲಿ ಆದೇಶಿಸಿದ್ದು, ಅದರಂತೆ ಇಲಾಖೆಯಲ್ಲಿನ ದಿನಗೂಲಿ ನೌಕರರನ್ನು ಕಛೇರಿ ಆದೇಶ ಸಂಖ್ಯೆ: 667/94-95, ದಿನಾಂಕ: 31/12/1994 ರಲ್ಲಿ ಕುಶಲ ಕೆಲಸಗಾರರಿಗೆ ಸಹಾಯಕರು (ಅರ್ಥಾತ್ ಅರೆಕುಶಲ ದಿನಗೂಲಿ ನೌಕರರು) ಹಾಗೂ ಕುಶಲರಲ್ಲದ ದಿನಗೂಲಿ ನೌಕರರು (ಅರ್ಥಾತ್ ಜವಾನರು : ಕ್ಲೀನರ್: ಮಜ್ದೂರ್ಸ್) ಎಂದು ವಿಂಗಡಿಸಿ ಮಜೂರಿ ನಿಗಧಿಪಡಿಸಲಾಗಿರುತ್ತದೆ |

**ಸಂಖ್ಯೆ: ಇಪಿ 07 ಇಎಸ್ ಡಬ್ಲ್ಯೂ 2023**

(ಬಿ.ಸಿ.ನಾಗೇಶ್)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು